# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19ನೇ ಸಾಲಿಗೆ ಆರ್ಥಿಕ ಇಲಾಖೆಯು ನೀಡಿರುವ ಅನುದಾನವನ್ನು ಖಜಾನೆ-2 ಮುಖಾಂತರ ರಾಜ್ಯ ಚುನಾವಣಾ ಆಯೋಗಕ್ಕೆ ಅನುದಾನವನ್ನು ಅಪಲೋಡ್ ಮಾಡುವ ಬಗ್ಗೆ.

**ಓದಲಾಗಿದೆ:**

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ಇವರ ಪತ್ರ ಸಂಖ್ಯೆ:ರಾಚುಆ:03:ಲೆಕ್ಕ/2018-19, ದಿನಾಂಕ:02-04-2018.
2. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:03/ಟಿಎಆರ್ 2016, ದಿನಾಂಕ:07-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಚುನಾವಣಾ ಆಯೋಗದ ಪತ್ರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಆರ್ಥಿಕ ಇಲಾಖೆಯು ಆಯವ್ಯಯದಲ್ಲಿ 2018-19ನೇ ಸಾಲಿಗೆ ಒದಗಿಸಿರುವ ವೇತನೇತರ ಅನುದಾನದ 1/4 ಭಾಗದ ಮೊದಲನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-11 | | | | ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | |
|---|---|---|---|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆ ಯಾಗಬೇಕಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) (1ನೇ ಕಂತು) | ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯ ದಲ್ಲಿ ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾ ಗಿರುವ ಅನುದಾನ (ರೂ.ಲಕ್ಷಗಳಲ್ಲಿ) (1ನೇ ಕಂತು) |
| 059 | ಜಿಲ್ಲಾ/ ತಾಲ್ಲೂಕು/ ಇತರೆ ಚುನಾವಣಾ ವೆಚ್ಚಗಳು | 645.00 | 161.25 | 041 | ಪ್ರಯಾಣ ವೆಚ್ಚಗಳು | 5.00 | 1.25 |
| | | | | 051 | ಸಾಮಾನ್ಯ ವೆಚ್ಚಗಳು | 84.00 | 21.00 |
| | | | | 071 | ಕಟ್ಟಡ ವೆಚ್ಚಗಳು | 50.00 | 12.5 |
| | | | | 195 | ಸಾರಿಗೆ ವೆಚ್ಚಗಳು | 27.00 | 6.75 |
| | | | | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.75 |
| ಒಟ್ಟು: | | | | | | **181.00** | **45.25** |

ಮೇಲೆ ಓದಲಾದ ಉಲ್ಲೇಖ (2)ರ ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿ ಇಲಾಖಾ ವೆಚ್ಚಗಳ ಅನುದಾನ ಬಿಡುಗಡೆ, ನಿಯಂತ್ರಣ, ಪುನರ್‌ವಿನಿಯೋಗ ಮುಂತಾದ ಚಟುವಟಿಕೆಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ಖಜಾನೆ-2 ಮೂಲಕವೇ ನಿರ್ವಹಿಸುವಂತೆ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 171 ತಾಪಸ 2017, ಬೆಂಗಳೂರು, ದಿನಾಂಕ:26-04-2018.**

2018-19ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯು ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ರಾಜ್ಯ ಚುನಾವಣಾ ಆಯೋಗದ ಮುಖ್ಯ ಲೆಕ್ಕ ಶೀರ್ಷಿಕೆಗಳಾದ 2515-00-101-0-11 ಮತ್ತು 2515-00-101-0-17ಗೆ ಅನುದಾನದ 1/4 ಭಾಗದ ಮೊದಲನೇ ಕಂತಿನ ಹಣವನ್ನು ಕ್ರಮವಾಗಿ ರೂ.161.25 ಮತ್ತು ರೂ.45.25ಲಕ್ಷಗಳನ್ನು ಖಜಾನೆ-2 ಮೂಲಕ ಅನುದಾನವನ್ನು ಅಪ್‌ಲೋಡ್ ಮಾಡಲು ಬಿಡುಗಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

26/4/2018

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು-1.
2. ಶಶಿಧರ.ಬಿ, ಹಿರಿಯ ಸಹಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ(ಜಿ.ಪಂ ಶಾಖೆ) ನಿಯಮಾನುಸಾರ ರಾಜ್ಯ ಚುನಾವಣಾ ಆಯೋಗದ ಮುಖ್ಯ ಲೆಕ್ಕ ಶೀರ್ಷಿಕೆಗಳಿಗೆ ಅನುದಾನವನ್ನು ಅಪ್‌ಲೋಡ್ ಮಾಡಲು ಕ್ರಮವಹಿಸುವುದು.

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಉಪಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ಮೇಲ್ವಿಚಾರಕರು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.